ಒಎಸ್ 378 / 15 ಡಿಡಬ್ಲ್ಯೂ 1

ಸಾಕ್ಷಿಯನ್ನು ದಿಃ 27.01.2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು

**ಮುಖ್ಯ ವಿಚಾರಣೆ- ಪ್ರತಿವಾದಿ ಪರ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿರುತ್ತದೆ. ನಾನು ಅದನ್ನು ನನ್ನ ವಕೀಲರಿಗೆ ಖುದ್ದಾಗಿ ಹೇಳಿ ತಯಾರು ಮಾಡಿಸಿರುತ್ತೇನೆ.

**ಪಾಟೀ ಸವಾಲುಃ ವಾದಿ ಪರ ಶ್ರಿ ಹೆಚ್ ಇ ಆರ್ ವಕೀಲರಿಂದಃ**

ಮಳವಳ್ಳಿ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಹಣವಸೂಲಾತಿ 3 ದಾವೆಗಳು ಇರುತ್ತವೆ. ಸದರಿ ದಾವೆಗಳಲ್ಲಿ ನಾನು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿರುವ ಮಾಹಿತಿಯನ್ನ ಓದಿ ಕೇಳಿ ತಿಳಿದುಕೊಂಡಿರುತ್ತೇನೆ. ನಿಪಿ 1 , 2 ರಲ್ಲಿರುವ ಸಹಿಗಳು ನನ್ನದಲ್ಲ. ಪ್ರತಿವಾದ ಪತ್ರದಲ್ಲಿ ಇರುವ ಸಹಿ ನನ್ನದೆ. ವಕಾಲತಲ್ಲಿ ಇರುವ ಸಹಿ ನನ್ನದೆ. ವಾದಿಯು ನನ್ನ ಮೇಲೆ ಹಣ ಕೊಡಬೇಕೆಂದು ದಾವೆ ಸಲ್ಲಿಸಿರುತ್ತಾರೆ. ನೋಟಿಸಿಗೆ ನಾನು ಉತ್ತರ ಕೊಟ್ಟಿರುವುದಿಲ್ಲ. ನೋಟಿಸಿಗೆ ಉತ್ತರ ಕೊಡಲು ಏಕೆ ಸಾಧ್ಯವಾಗಲಿಲ್ಲ ಎಂದರೆ ನನಗೆ ವಾದಿ ಗೊತ್ತಿಲ್ಲದ ಕಾರಣ ಹಾಗೂ ಅವರನ್ನು ಹುಡುಕಿ ವಿಚಾರಣೆ ಮಾಡಲಾಗಿ ಸಮಯಾವಕಾಶ ಸಿಗದಿದ್ದಕ್ಕೆ ಉತ್ತರ ಕೊಟ್ಟಿರುವುದಿಲ್ಲ. ಸದರಿ ವಿಚಾರ ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇನೆ ನನಗೆ ನೆನಪಿಲ್ಲ. ಸದರಿ ವಿಚಾರ ವಿಚಾರಣೆ ಕೊಡುವ ವೇಳೆ ತಿಳಿದುಕೊಳ್ಳಲು ತೊಂದರೆ ಇರಲಿಲ್ಲ. ನಾನು ನೀರಾವರಿ ಇಲಾಖೆಯಲ್ಲಿ ಟೈಪಿಸ್ಟಾಗಿ ಕೆಲಸ ಮಾಡುತ್ತೇನೆ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂಎಫ್.ಸಿ

ಮಳವಳ್ಳಿ